ಬಿ.ಆರ್. ಉಷಾ, ಬೆಂಗಳೂರು
ಲವರ್ಸ್ ಕೈ ಕೈ ಹಿಡಿದುಕೊಳ್ತಾರೆ. ಗಂಡ ಹೆಂಡತಿ ದೂರ ದೂರ ಹೋಗ್ತಾರೆ. ಯಾಕೆ?



ನೌಕರಿ ನಿಯಮ; ಅಪ್ರೆಂಟೈಸ್ ಆದಾಗ ಆಸಕ್ತಿ, ಪರ್ಮನೆಂಟ್ ಆದಾಗ ಅಸಡ್ಡೆ.

ಬಾ.ರಂ. ಸುರೇಶ್, ಶಿವಮೊಗ್ಗ
ಬಾಳು ಬಂಗಾರವಾಗಲು ಏನು ಮಾಡಬೇಕು ಶಿವಾ?
ಶ್ರಮದ ಗಣಿಗಿಳಿದು ತಿಳುವಳಿಕೆಯ ಅದಿರನ್ನು ಹೆಕ್ಕಿ ಅನುಭವದ ಆಭರಣವಾಗಿಸಿ ವಿವೇಕದ ಪಾಲಿಷ್ ಹಚ್ಚಬೇಕು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಕಳ್ಳನಲ್ಲಿರುವ ಶ್ರದ್ಧೆ, ಪ್ರಾಮಾಣಿಕತೆ, ಉತ್ಸಾಹ ಮುಂತಾದ ಗುಣಗಳನ್ನು ಏನೆಂದು ಕರೆಯೋಣ?
ತಿಪ್ಪೆಯಲ್ಲಿ ಬಿದ್ದಿರುವ ಬಾದಾಮಿ ಹಲ್ವ.

ರತ್ನಾ ಕೊರವರ
ಇಲ್ಲೊಂದು ಕಾಗೆ ತನ್ನ ಬಳಗವನ್ನು ಕರೆಯದೆ ತಾನೊಂದೇ ಹಾಕಿದ ಅನ್ನವನ್ನು ತಿನ್ನುತ್ತದಲ್ಲಾ?



ಸಾಕುಕಾಗೆ ಇರಬೇಕು. ಸಾಕುಪ್ರಾಣಿಗಳು ಮಾಲೀಕರ ಗುಣವನ್ನು ಅನುಕರಿಸುತ್ತವೆ.

ಎಸ್.ವಿ. ಶ್ರೀನಿವಾಸ್, ಮೈಸೂರು
ಒಂದು ವೇಳೆ ಅಡ್ಡಗೋಡೆಯ ಮೇಲೆ ದೀಪ ಇಟ್ಟುಬಿಟ್ಟರೆ ಏನಾಗುತ್ತದೆ?
ದೀಪಕ್ಕೆ ಎಣ್ಣೆ ಹಾಕುವವರು ಯಾರು ಎಂಬುದರ ಬಗ್ಗೆ ವಿವಾದ ಹುಟ್ಟುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹಣ ಕೊಡದೇ ದೊರಕುವ ಸರಕು ಯಾವುದು?
ಚೆಕ್ ನೀಡಿದಾಕ್ಷಣ ಬ್ಯಾಂಕಿನವ ನೀಡುವ ಟೋಕನ್.

ಕಣ್ಣೂರು ಗೋವಿಂದಾಚಾರಿ, ಮೈಸೂರು
ಹಬ್ಬ ಮದುವೆಗಳಿಗೆ ಹೆಚ್ಚಾಗಿ ಸೇರುವ ಬಂಧುಬಳಗ ಶ್ರಾದ್ಧ ವೈಕುಂಠಗಳಂದು ಸೇರುವುದಿಲ್ಲವಲ್ಲ?
ಊಟ ಲೇಟಾಗತ್ತೇಂತ.

ಮಹಾವೀರ ಕಾಸರ. ಶಿವಮೊಗ್ಗ
ಗಂಡ ಅಡುಗೆಮನೆಯ ಒಂದೊಂದೆ ಕೆಲಸ ವಹಿಸಿಕೊಂಡಮೇಲೆ ಹೆಂಡತಿಗೇನು ಕೆಲಸ?
Male ವಿಚಾರಣೆ.

5ದಿನೇಶ್, ಗುಡ್ಡದೂರು
ವಿಧಾನಸೌಧಕ್ಕೂ, ವಿಕಾಸಸೌಧಕ್ಕೂ ಇರುವ ವ್ಯತ್ಯಾಸವೇನು?
ಅದನ್ನು 100% ಕೈದಿಗಳು ಕಟ್ಟಿದರು; ಇದನ್ನು 40% ಕಮಿಷನ್ ಕ್ರಿಮಿನಲ್‌ಗಳು ಕಟ್ಟಿಸಿದರು.

ನಿರುಕ್ತಾ, ಬೆಂಗಳೂರು
ಪೈಪ್‌ಲೈನ್‌ನಲ್ಲಿ ಅಡುಗೆ ಅನಿಲದಂತೆಯೇ ಹಣ ಹರಿದು ಬಂದರೆ ಏನು ಸ್ಥಿತಿ ಆಗಬಹುದು ರಾಮಣ್ಣ?
ಐಟಿಯವರು ಪ್ಲಂಬರನ್ನು ಕಳುಹಿಸಿ ಪ್ಲಗ್ ಹಾಕಿಸುತ್ತಾರೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಟೀವಿ ಧಾರಾವಾಹಿಗಳಿಗೆ ಇಂತಿಷ್ಟು ವಾರಗಳ ಸಮಯ ನಿಗದಿಪಡಿಸಿದರೆ ಸೂಕ್ತವಲ್ಲವೆ?
ಈಗಲೂ ಏಳೇ ವಾರಗಳ ನಿಗದಿ ಇದೆಯಂತೆ ಸೋಮವಾರ, ಮಂಗಳವಾರ, ಬುಧವಾರ...

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದೇವರಿಗೆ ಗರ್ಭಗುಡಿ. ಮಂತ್ರಿಗಳಿಗೆ?
ದರ್ಪಗುಡಿ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ರಾಜಕೀಯ ನಾಯಕರು ಸದಾ ಕಚ್ಚಾಡಲು ಕಾರಣ?
ನಾಯ ಕರುಗಳಲ್ಲವೇ!

ಧನ್ಯತ ಎಂ.ಸಿ. ಬೆಂಗಳೂರು
ಮನಿ ಬ್ಯಾಂಕಿಗೂ, ವೋಟ್ ಬ್ಯಾಂಕಿಗೂ ಏನು ವ್ಯತ್ಯಾಸ?
ಇಲ್ಲಿ ಧನ ಕಾಯ್ತಾರೆ; ಅಲ್ಲಿ ಜನ ಕಾಯ್ತಾರೆ.

## ವಾರದ ಪ್ರಶ್ನೆ

ಕೆ.ಎಂ. ವಿಭೂತಿ, ಹರಿಹರ
ಎಂ.ಆರ್.ಪಿ. ಕುಡುಕರಿಗೆ ರಾಜ್ಯಸರ್ಕಾರ ವಿಮೆ ಸೌಲಭ್ಯ ನೀಡಿದರೆ ಹೇಗೆ ಗುರುಗಳೆ?
ವಿಮಾ ಕಂಪನಿ ಓಲಾಡತೊಡಗುತ್ತದೆ.

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
ಮೊಬೈಲ್ ಬಳಸದ ಹುಡುಗಿಯ ಕೈ ಹಿಡಿಯಲು ಮುಂದಾಗಿದ್ದೇನೆ. ಸಿಗುವಳೆ ಗುರುಗಳೆ?
ಕುಗ್ರಾಮದಲ್ಲೆಲ್ಲೋ ದೊರೆತಾಳು. ವಯಸ್ಸು ತೊಂಬತ್ತು ದಾಟಿರುತ್ತೆ. ಓಕೆನಾ?

ಮೋಹನರಾಜು ಎಸ್.ಎ. ಶಂಕರಘಟ್ಟ
ಸ್ತ್ರೀಯರಿಗೆ ದೂರದೃಷ್ಟಿ ಇರುತ್ತದಂತೆ. ಪುರುಷರಿಗೆ?
ಸ್ತ್ರೀಯರ ಚಲನವಲನವಿದ್ದೆಡೆ ಸೂಪರ್ ವಿಷನ್.

ವಿ.ಎಂ. ಮೇಗೂರ, ಧಾರವಾಡ
ವೈದ್ಯರು ಹೆಚ್ಚಾಗಿ + ಸಂಕೇತವನ್ನು ಬಳಸಲು ಕಾರಣವೇನು?



ಪಾಸಿಟಿವ್ ಆದವರಿಗೆ ಪಾಸಿಟಿವ್ ಆಗಿ ಚಿಕಿತ್ಸೆ ನೀಡುವುದರಿಂದ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ತಿನ್ನೋದರಲ್ಲಿಯೂ ಉಣ್ಣೋದರಲ್ಲಿಯೂ ವ್ಯತ್ಯಾಸ ಇದೆಯಾ?
ಇದೆ. ಲಂಚವನ್ನು ಉಣ್ಣುವುದಿಲ್ಲ; ತಿನ್ನುತ್ತಾರೆ.

ಮಲ್ಲಿಕಾರ್ಜುನ, ಸುರಧೇನುಪುರ
ಕಿವಿಯಲ್ಲಿ ತಮಟೆ. ಕವಿಯಲ್ಲಿ?
ತಮಟೆಯನ್ನು ಸೀಳಬಲ್ಲ ಕವನಾಯುಧ.

■ ರಾಮ್

ನೀವೂ ಪ್ರಶ್ನೆ ಕಳಿಸಿ: editorsu@sudha.co.in